# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,

# ಬೆಂಗಳೂರು ನಗರ.

## ಸಿಸಿ. 5703/2017

| | |
|---|---|
| ಸಾಕ್ಷಿದಾರರ ಹೆಸರು | ರಮೇಶ ಪಟೇಲ್ |
| ತಂದೆಯ ಹೆಸರು | ಲೇಟ್. ನರಸಿಂಹಯ್ಯ |
| ವಯಸ್ಸು | 57 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ | ಪೀಣ್ಯ, ಬೆಂಗಳೂರು |
| ಪ್ರಮಾಣೀಕರಿಸಿದ ದಿನಾಂಕ | 02/12/2023 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು 2016 ರಿಂದ ಸರ್ಕಾರಿ ಪದವಿ ಪೂರ್ಣ ಕಾಲೇಜು, ಪೀಣ್ಯ, ಬೆಂಗಳೂರು ಇದರ ಕಾಲೇಜು ಅಭಿವೃದ್ದಿ ಸಮಿತಿಯ ಉಪಾಧ್ಯಕ್ಷ ಆಗಿರುತ್ತೇನೆ. ಆಗ 1 ನೇ ಆರೋಪಿ ರಾಮು ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಸರ್ಕಾರಿ ಪ್ರೌಢ ಶಾಲೆಯ ಒಂದು ಚೆಕ್ ಬುಕ್ 1 ನೇ ಆರೋಪಿಯ ಕೈಗೆ ಬಂದಿತ್ತು, ಅದು ಹೇಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಆ ಚೆಕ್ ಬುಕನ್ನು 1 ನೇ ಆರೋಪಿ ಲಕೋಟೆಯಲ್ಲಿ ಬಂದಿದ್ದ ಚೆಕ್ ಬುಕ್ ನ್ನು ತೆಗೆದು ನೋಡಿ ಆತ ಅದನ್ನು ವಾಪಾಸು ಕಳುಹಿಸಬೇಕಾಗಿತ್ತು, ಆದರೆ ಆತ ಅದನ್ನು ಮರಳಿ ಕಳುಹಿಸದೆ ತನ್ನ ಸ್ವಂತಕ್ಕೆ ದುರುಪಯೋಗಪಡಿಸಿಕೊಂಡಿರುತ್ತಾನೆ. ಸದರಿ ಚೆಕ್ ಬುಕ್ ನ ಪೈಕಿ ಒಂದು ಚೆಕ್ ಮೊತ್ತ ರೂ.8,741/- ನ್ನು ಬರೆದು, ಇನ್ನೊಂದು ಚೆಕ್ ನ ಮೊತ್ತ ರೂ.3,311/- ನ್ನು ಬರೆದು ಅವುಗಳನ್ನು ಕೆ.ಇ.ಬಿ. ಗೆ ಕೊಟ್ಟು ಕಾಲೇಜಿನ ಕೆ.ಇ.ಬಿ. ಬಿಲ್ ತುಂಬಿರುತ್ತಾನೆ. ಇದಾದನಂತರ ಒಂದು ಚೆಕ್ ನ್ನು ರೂ.60,000/- ಮತ್ತು ಇನ್ನೊಂದು ಚೆಕ್ ನ್ನು ರೂ.40,000/- ಬರೆದು ಸೆಲ್ಫ ಅಂತ ಬರೆದು ಹಣ ತೆಗೆದುಕೊಂಡು ಸ್ವಂತಕ್ಕೆ ಉಪಯೋಗಿಸಿಕೊಂಡಿರುತ್ತಾನೆ. ಇದೆಲ್ಲ ನಡೆದಿರುವುದು ಪ್ರೌಢ ಶಾಲೆಯ ಚೆಕ್ ಬುಕ್ ನಲ್ಲಿ, ಕಾಲೇಜಿನ ಚೆಕ್ ಬುಕ್ ನಲ್ಲಿ ಅಲ್ಲ.

ಸದರಿ ಪ್ರೌಢ ಶಾಲೆಯ ಚೆಕ್ ಬುಕ್ ನ ಖಾತೆ ಸಂಖ್ಯೆ. 404131923 ಇರುತ್ತದೆ. ನನಗೆ ಚೆಕ್ ನಂಬರ್ ಗಳು ನೆನಪಿಲ್ಲ.

2. ಪ್ರೌಢ ಶಾಲೆಯ ಹೆಡಮಾಸ್ಟರ್ ಪಾಸಪುಸ್ತಕದಲ್ಲಿ ನಮೂದು ಮಾಡಿಸಿದಾಗ ಈ ವಿಷಯ ಗೊತ್ತಾಗಿರುತ್ತದೆ. ಒಟ್ಟು 1,12,853/- ಹಣ ದುರುಪಯೋಗಪ ಆಗಿರುತ್ತದೆ. 1 ನೇ ಆರೋಪಿಯ ಹೆಸರನ್ನು ನೋಡಿ ಪ್ರೌಢ ಶಾಲೆಯ ಹೆಡಮಾಸ್ಟರ್ ನಮ್ಮ ಕಾಲೇಜಿಗೆ ಬಂದು ಕೇಳಿದರು. 1 ನೇ ಆರೋಪಿ ಅವರ ಜೊತೆ ಗಲಾಟೆ ಮಾಡಿ ಇದು ಬ್ಯಾಂಕ್ ನವರು ಮಾಡಿರುವ ತಪ್ಪು ಅವರನ್ನು ಕೇಳು ಎಂದು ಹೇಳಿ ಕಳಿಸಿದರು. ಸದರಿ ಪ್ರೌಢ ಶಾಲೆಯಲ್ಲಿಯೂ ಸಹ School Betterment committee ಇದ್ದು, ಅವರು ಸಹ ಬ್ಯಾಂಕ್ ಗೆ ಹೋಗಿ ವಿಚಾರಿಸಿದಾಗ, ಬ್ಯಾಂಕ್ ನವರು ಗಾಭರಿಯಾಗಿ ಅದರಿಂದ ಬಚಾವ್ ಆಗಲು ನಮ್ಮ ಕಾಲೇಜಿನ ಖಾತೆ ಸಂಖ್ಯೆ.404133465 ಸಹ ಅಲ್ಲಿಯೇ ಇದ್ದುದರಿಂದ, ಸದರಿ ಖಾತೆಯಲ್ಲಿನ ಹಣವನ್ನು ನಮಗೆ ಹೇಳಲು ಅವರ ಖಾತೆಗೆ ವರ್ಗಾವಣೆ ಮಾಡಿರುತ್ತಾರೆ. ಸದರಿ ಚೆಕ್ ಗೆ ನನ್ನದು ಮತ್ತು ಪ್ರಾಚಾರ್ಯರ ಸಹಿ ಇದ್ದರೇ ಮಾತ್ರ ಹಣ ಡ್ರಾ ಆಗುತ್ತದೆ. ಆದರೆ ನಾನು ಸಹಿ ಮಾಡದೇ ಹಣ ವರ್ಗಾವಣೆ ಮಾಡಿ ಮೋಸ ಮಾಡಿರುತ್ತಾರೆ. ಆಗ ನಾವು ಎಮ್.ಎಲ್.ಎ. ಹತ್ತಿರ ಹೋಗಿ ಚರ್ಚಿಸಿ ಈ ದೂರನ್ನು ನೀಡಿರುತ್ತೇವೆ. ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ, ನಾನು ಮತ್ತು ಆಗಿನ ಪ್ರಾಚಾರ್ಯರರಾದ ಬಂಡಾರಿಯವರು ಸೇರಿ ದೂರು ನೀಡಿರುತ್ತೇವೆ. ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ. ಎಮ್,ಎಸ್.ಪಿ. ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

**ಸಾಕ್ಷಿಯನ್ನು ಪುನಃ ದಿನಾಂಕ 10/01/2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು : ಆರೋಪಿ ಪರ ಶ್ರೀ. ಕೆ.ಎಲ್. ವಕೀಲರಿಂದಃ**

3.ಪೀಣ್ಯ ಪದವಿಪೂರ್ವ ಕಾಲೇಜು ಮತ್ತು ಸರ್ಕಾರಿ ಪೌಢ ಶಾಲೆ, ಪೀಣ್ಯ ಬೇರೆ ಬೇರೆ ಕಟ್ಟಡದಲ್ಲಿರುತ್ತವೆ ಎನ್ನುವುದು ಸರಿ. ಎರಡು ಕಟ್ಟಡಗಳಿಗೆ 300 ಮೀಟರ್ ಅಂತರವಿರುತ್ತದೆ ಎನ್ನುವುದು ಸರಿ. ಎರಡು ಅಂದರೆ ಕಾಲೇಜು ಮತ್ತು ಪೌಢ ಶಾಲೆಯ ಆಡಳಿತ ಮಂಡಳಿ ಪ್ರತ್ಯೇಕ ಇರುತ್ತದೆ, ಅದಕ್ಕೆ ಇದಕ್ಕೆ ಸಂಬಂಧವಿರುವುದಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಎರಡು ಬಾರಿ ಆರ್.ಎಮ್.ಸಿ. ಯಾರ್ಡ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೇನೆ ಎಂದರೆ ಸರಿ. ದಿನಾಂಕ 19/02/2016 ರ ದೂರಿನಲ್ಲಿ ಆರೋಪಿ ಹಣ ದುರುಪಯೋಗಪಡಿಸಿಕೊಂಡಿದ್ದಾನೆ ಎಂದು ತಿಳಿಸಿಲ್ಲ ಎಂದರೆ ಮೊದಲು ನಾವು ಬ್ಯಾಂಕ್ ಮೇಲೆ ಮಾತ್ರ ದೂರು ನೀಡಿದ್ದೇವು, ಬಾಂಕ್ ನವರಿಂದ ತಪ್ಪಾಗಿರಬಹುದು ಎಂದು ಭಾವಿಸಿ ದೂರು ನೀಡಿದ್ದೇವು. ನಂತರ ಎಮ್.ಎಲ್.ಎ. ಯವರ ಜೊತೆ ಚರ್ಚೆ ಮಾಡಿದಾಗ ಎಮ್.ಎಲ್.ಎ. ರವರು ಸದರಿ ಆರೋಪಿಯ ವಿರುದ್ದವೂ ಸಹ ದೂರು ನೀಡಲು ತಿಳಿಸಿದಾಗ ಮತ್ತೊಮ್ಮೆ ದೂರು ನೀಡಿದ್ದೇವೆ.

4. ಯಾವ ದಿನಾಂಕದಂದು ಪೌಢ ಶಾಲೆಯ ಚೆಕ್ ಬುಕ್ ಆರೋಪಿಯ ಕೈಗೆ ಬಂದಿತ್ತು ಎಂಬುದನ್ನು ನಾನು ಹೇಳಲು ಆಗುವುದಿಲ್ಲ, ಅದನ್ನು ಆತನೇ ಹೇಳಬೇಕು. ಸದರಿ ಚೆಕ್ ಬುಕ್ ನಲ್ಲಿ ಎಷ್ಟು ಚೆಕ್ ಗಳು ಇದ್ದವು ಎಂದು ನಾನು ನೋಡಿಲ್ಲ ಎಂದರೆ ಆರೋಪಿ ತೋರಿಸಿಲ್ಲ. ಪೊಲೀಸರು ಸಹ ಸದರಿ ಚೆಕ್ ಗಳನ್ನು ವಶಪಡಿಸಿಕೊಂಡು ನಮಗೆ ತೋರಿಸಿಲ್ಲ ಎನ್ನುವುದು ಸರಿ. ಚೆಕ್ ನಂಬರ ಮತ್ತು ಮೊತ್ತವನ್ನು ಪೊಲೀಸರು ನನಗೆ ಹೇಳಿ ಕೊಟ್ಟಿದ್ದಕ್ಕೆ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ. 4 ಚೆಕ್ ಗಳಲ್ಲಿ Principal Government P.U College, Peenya ಎಂದು ಬರೆದಿರುವುದರಿಂದ ಆರೋಪಿ ಸದರಿ ಮೊತ್ತವನ್ನು ಕಾಲೇಜಿನ ಬೆಸ್ಕಾಂ ಬಿಲ್ ಮತ್ತು ವಾಟರ್ ಬಿಲ್ ಮತ್ತು ಇತರೇ ಬಿಲ್ ಗಳಿಗೆ

ಪಾವತಿ ಮಾಡಿರುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ. ಹೈಸ್ಕೂಲ್ ನವರು ನಮ್ಮ ದುಡ್ಡು ಆರೋಪಿ ಡ್ರಾ ಮಾಡಿದ್ದಾರೆ ಎಂದು ಹೇಳಿದ್ದಕ್ಕೆ ನಮಗೆ ಗೊತ್ತಾಗಿದೆ.

5. ದಿನಾಂಕ 19/02/2016 ರಂದು ಫಿರ್ಯಾದಿನಲ್ಲಿ ರಾಮು ರವರಿಗೆ ವಿಚಾರಿಸಿದಾಗ ಇನ್ನೊಂದು ಅಕೌಂಟ್ ನಿಂದ ಅಂದರೆ ಪೌಢ ಶಾಲೆಯ ಖಾತೆಗೆ ಹಣ ವರ್ಗಾವಣೆಯಾಗಿದೆ ಎಂದು ಬ್ಯಾಂಕ್ ನವರು ತಿಳಿಸಿದರು ಎಂದು ಹೇಳಿದ್ದೇನೆ ಎಂದರೆ ಹೈಸ್ಕೂಲ್ ನವರು ಬ್ಯಾಂಕ್ ಗೆ ಹೋಗಿ ಗಲಾಟೆ ಮಾಡಿದಾಗ ಬ್ಯಾಂಕ್ ನವರು ಯಾವುದೇ ಅನುಮತಿ ಇಲ್ಲದೆ ಪಿ.ಯು ಕಾಲೇಜಿನ ಖಾತೆಯಿಂದ ಪೌಢ ಶಾಲೆಯ ಖಾತೆಗೆ ಹಣ ವರ್ಗಾವಣೆ ಮಾಡಿರುತ್ತಾರೆ ಅದನ್ನು ಹೇಳಿದ್ದೇನೆ. ಈ ಕುರಿತು ಬ್ಯಾಂಕ್ ನವರ ಮೇಲೆ ದೂರು ನೀಡಿದ್ದೇನೆ ಎನ್ನುವುದು ಸರಿ. ನಂತರ ದಿನಾಂಕ 21/02/2016 ರಂದು ಅಂದಿನ ಎಮ್.ಎಲ್.ಎ. ಮುನಿರತ್ನ ರವರು ಹೇಳಿದ್ದಕ್ಕೆ ಆರೋಪಿಯ ಹೆಸರು ಸೇರಿಸಿ ಮತ್ತೊಮ್ಮೆ ದೂರು ಸಲ್ಲಿಸಿದ್ದೇನೆ ಎಂದರೆ ಸರಿ. ಬ್ಯಾಂಕ್ ನವರ ತಪ್ಪು ಇರುತ್ತದೆ ಎಂದರೆ ಸರಿ. ಸಾಕ್ಷಿ ಸ್ವತಃ ಆರೋಪಿಯ ತಪ್ಪು ಇರುತ್ತದೆ ಎಂದು ಹೇಳುತ್ತಾರೆ. ನಾನು ಯಾವುದೇ ದಾಖಲೆಗಳನ್ನು ನೋಡದೆ ಮುನಿರತ್ನ ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಆರೋಪಿಗೆ ಪೋಸ್ಟ ಮೂಲಕ ಚೆಕ್ ಬುಕ್ ಕಳಿಸಿದ್ದಕ್ಕೆ ಆರೋಪಿ ಸದರಿ ಚೆಕ್ ಬುಕ್ ಮೇಲೆ ಬೆಸ್ಕಾಂರವರಿಗೆ ಮತ್ತು ಇತರರಿಗೆ ಬಿಲ್ ಪಾವತಿ ಮಾಡಲು ಬರೆದು ಕೊಟ್ಟಿರುತ್ತಾರೆ ಎಂದರೆ ಸದರಿ ಚೆಕ್ ಗಳಲ್ಲಿ ಹೈಸ್ಕೂಲ್ ನವರ ಅಕೌಂಟ್ ನಂಬರ್ ಸರಿಯಾಗಿ ಇರುತ್ತದೆ, ಆದರೆ ಪಿ.ಯು. ಕಾಲೇಜು ಎಂದು ಸಹಿ ಇದ್ದ ಕಡೆಗೆ ತಪ್ಪಾಗಿ ಪ್ರಿಂಟ್ ಆಗಿರುತ್ತದೆ. ಸಾಮಾನ್ಯವಾಗಿ ಪ್ರಾಂಶುಪಾಲರು ವರ್ಗಾವಣೆಯಾಗುತ್ತಿರುತ್ತಾರೆ ಎನ್ನುವುದು ಸರಿ. ಆದರೆ ಖಾತೆ ಅದೇ ಇರುತ್ತದೆ ಎನ್ನುವುದು ಸರಿ. ವರ್ಗಾವಣೆಯಾಗಿ ಬಂದಾಗ ಮಾದರಿ ಸಹಿಗಳನ್ನು ಪಡೆದು ಬಾಂಕ್ ಗೆ ಸಲ್ಲಿಸುವುದು ಇರುತ್ತದೆ ಎನ್ನುವುದು ಸರಿ. ಆರೋಪಿ ಅಕೌಂಟ್ ನಂಬರ್ ನೆನಪಿಲ್ಲದೆ, ಅದನ್ನು ಗಮನಿಸದೆ ಅದು ತಮ್ಮದೇ ಚೆಕ್ ಬುಕ್ ಎಂದು ತಿಳಿದು ಹಣ ಡ್ರಾ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

7. ಹೈಸ್ಕೂಲ್ ನವರು ಬಂದು ಗಲಾಟೆ ಮಾಡಿದರು ಎಂದು ಯಾವ ದಿನಾಂಕ ಗಲಾಟೆ ಮಾಡಿರುತ್ತಾರೆ ಎಂದರೆ ಯಾವ ದಿನಾಂಕ ಗಲಾಟೆ ಮಾಡಿದ್ದರು ಎಂದು ನೆನಪಿಲ್ಲ. ಫೆಬ್ರುವರಿ ತಿಂಗಳಿನಲ್ಲಿ ಆರೋಪಿ ಸಸ್ಪೆಂಡ್ ಆಗಿದ್ದ, ಆತ ಆ ತಿಂಗಳಲ್ಲಿ ಇರಲಿಲ್ಲ ,ಆ ತಿಂಗಳಲ್ಲಿ ಗಲಾಟೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಲ್ಲಿ ನಡೆದಿರುವ ಎಲ್ಲ ಘಟನೆಗೆ ಬ್ಯಾಂಕ್ ನವರ ತಪ್ಪು ಇರುತ್ತದೆ, ಆರೋಪಿಯ ತಪ್ಪು ಇರುವುದಿಲ್ಲ ಎಂದರೆ ಬ್ಯಾಂಕ್ ನವರ ಮತ್ತು ಆರೋಪಿಯ ಇಬ್ಬರ ತಪ್ಪು ಇರುತ್ತದೆ. ಚೆಕ್ ನಂಬರ್ ಗಳನ್ನು ಹೈಸ್ಕೂಲ್ ನವರು ದಾಖಲೆಗಳನ್ನು ತೋರಿಸಿದಾಗ ನೋಡಿ ತಿಳಿದುಕೊಂಡಿರುತ್ತೇನೆ. ನಾನು ದೂರಿನ ಜೊತೆ ಸದರಿ ಚೆಕ್ ಗಳನ್ನು ಕಲೆಕ್ಟ ಮಾಡಿ ಕೊಟ್ಟಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಆರೋಪಿಯ ಯಾವುದೇ ತಪ್ಪು ಇರದೇ ಇದ್ದರೂ ಸಹ ಮುನಿರತ್ನ ರವರ ಮಾತು ಕೇಳಿಕೊಂಡು ಆರೋಪಿಯ ವಿರುದ್ದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**